RegdNo B G 155 Sri 25—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅವ.ನಿಬಸ್ತೇದಾರ್ ಎಂ ಏ ಸುಬ್ಬರಾಯರು ಸಂಪಾದಕರು — ಧರ್ಮೋಪ್ರಚಾರನಿರತ ಎಂ ಎಸ್ ಕೃಷ್ಣರಾವ್

ಪಾಕಿಸ್ತಾನಕ್ಕೆ

ಭಾರತವು ಈ ಏಪ್ರಿಲ್ನಲ್ಲಿ 77907 ಟನ್ ಕಲ್ಲಿದ್ದಲನ್ನು ಪಾಕಿಸ್ತಾನಕ್ಕೆ ರಫ್ತು ಮಾಡಿತು.

★

ಬೆಕಾಲ್ಟೆಂಡು

ರಷ್ಯಾದ ಕಾಲ್ಚಂಡಾಟದ ತಂಡವು ಈ ವರ್ಷ ಭಾರತಕ್ಕೆ ಭೇಟಿ ಕೊಟ್ಟು ಅನೇಕ ಕೇಂದ್ರಗಳಲ್ಲಿ ಪ್ರದರ್ಶನ ಪಂಥಗಳನ್ನಾಡುವೆಂದು ಬೊಂಬಾಯಿ ವಾರ್ತೆ ತಿಳಿಸಿದೆ.

ಸಮ್ಮೇಳನ ಮುಂದಕ್ಕೆ ಹೋಗಲಿ

ಲಂಡನ್— ಕಾಮನ್ವೆಲ್ತಿನ 13 ಆಫ್ರೋ-ಏಷ್ಯಾ ರಾಷ್ಟ್ರಗಳ ನಾಯಕರು ಅಲ್ಜೀರ್ಸ್ ಉನ್ನತ ಮಟ್ಟದ ಸಮ್ಮೇಳನವನ್ನು ಮುಂದಕ್ಕೆ ಹಾಕಬೇಕೆಂಬ ತಮ್ಮ ಹಿಂದಿನ ನಿಲುವನ್ನೇ ಪುನರ್ಘಿಸಿದ್ದಾರೆ.

ಸ್ವಯಂಕೃತಾಪರಾಧ

ವಾಷಿಂಗ್ಟನ್— ಪಾಕಿಸ್ತಾನವು ತಾ ಮ್ಯೂನಿಸ್ಟು ಚೀನಾದೊಡನೆ ಏಕತೃತೆ ಹೆಚ್ಚಿಸಿಗೊಳ್ಳುತ್ತಿರುವುದು. ಅಮೇರಿಕಾ ಕ್ಕೆ ಪಾಕಿಸ್ತಾನ ವಿಷಯದಲ್ಲಿ ವಿಶ್ವಾಸವೂ ನೆಂಬಿನ ಕಾರ್ಯಕ್ರಮದಲ್ಲಿ ತಗ್ಗಲೂ ಅವಕಾಶವಾಗಿದೆ.

ಪ್ರವಾಸಿಕ ಆಳ್ವಿವೃದ್ಧಿಗೆ

ಹೈದರಾಬಾದು— ಪ್ರವಾಸಿಕ ಅಭಿವೃದ್ಧಿಗೆ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ 25 ಕೋಟಿ ರೂಗಳು ಹಂಗಾಮಿಯಾಗಿ ನಿಗದಿ ಮಾಡಲಾಗಿದೆಯೆಂದು ಭಾರತ ಪ್ರವಾಸಿಕ ಮಂತ್ರಿ ಶ್ರೀ ರಾಜಬಹದ್ದೂರರವರು ಹೇಳಿದರು

ಗುಂಡಿನ ಹೊಡೆತ

ಪಿಲಾಂಗು— ತಿಮೂರ-ಪೂರ್ವ ಪಾಕಿಸ್ತಾನದ ಗಡಿ ಬೆಲೋನಿಯಾದಲ್ಲಿ ಪಾಕಿಸ್ತಾನ ಸೈನಿಕರು ಗುಂಡುಹಾಕುತ್ತಲೇ ಇದ್ದಾರೆ

ದೇವತೆಗಳ ಹತ್ಯಿರ

ನವದೆಹಲಿ— ಎವರೆಸ್ಟು ಹತ್ತಿದ ತಂಡದ ಸೊನಂವಾಂಗಿಲ್ ಹೀಗೆ ತಿಳಿಸಿರುವರು— ' ಎವರೆಸ್ಟಿಗೆ ನಮ್ಮ ಹೆಸರಾದ ' ಸಗರ'ಮಾತಾ ' ದಲ್ಲಿ ಸಾಪದ್ದಾಗ, ದೇವತೆಗಳು ಅಲ್ಲಿದ್ದಾರೆಂಬ ನಂಬಿಕೆಯುಳ್ಳ ನಾನು, ಅವರ ಹತ್ತಿರ ಇದ್ದಂತೆ ಭಾವನೆ ಹೊಂದಿದ್ದೆನು '

ಭಾರತ ನಾಗರೀಕತೆ

ಮೈಸೂರು— ಭಾರತದ ನಾಗರೀಕತೆಯು ಸಂಬಂಧವಾದ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆಯನ್ನು ನಿನ್ನೆ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ|| ಶ್ರೀವಾಲಿ ಉದ್ಘಾಟಿಸಿದರು.

★

ಬಟ್ಟೆ ಹತೋಟ

ಬಟ್ಟೆ ಹತೋಟಿಯನ್ನು ಸಡಲಿಸುವದಿಲ್ಲವೆಂದು ನವಡೆಹಲಿ ವಾರ್ತೆ ತಿಳಿಸುತ್ತದೆ

ಅಲ್ಜೀರ್ಸ್ ಸಮ್ಮೇಳನ

ಕೈರೊ— ಭಾರತ ಪ್ರಧಾನಿ ಶಾಸ್ತ್ರಿಗಳು ಅಲ್ಜೀರ್ಸ್ ಸಮ್ಮೇಳನ ಬಗ್ಗೆ ಈಜಿಪ್ಟ್, ನಾಯಕರೊಡನೆ ಚರ್ಚಿಸಿದರು.

ಬೆಂಗಳೂರಿನಲಿ 1.5 ಕೋಟಿ ರೂ.ಗಳ ವಧಾಗೃಹ

ಬೆಂಗಳೂರು— ನಗರದ ಹೊರಗೆ ಕೊಮ್ಮಂಗಲ ಕಣಿವೆಯಲ್ಲಿ 105 ಕೋಟಿ ರೂಗಳ ನವೀನ ವಧಾಗೃಹವನ್ನು ನಿರ್ಮಿಸಲು ಕಾರ್ಪೋರೇಷನ್ ಹಲ್ ಕಮಿಟಿಯು ತೀರ್ಮಾನಿಸಿರುವುದಾಗಿ ವರದಿಯಾಗಿದೆ.

ಭಾವಿಯವರಿಗೆ ಸಾವಿರ ಗಾಯಗಳು

ರತ್ನಾಂ (ಮಧ್ಯ ಪ್ರದೇಶ)— ಹತ್ತು ವರ್ಷಗಳಿಂದ ಭೂದಾನ ಚಳವಳಿಗಾಗಿ ಸಾವಿರಾರು ಮೈಲಿ ಪಾದಯಾತ್ರೆ ನಡೆಸಿದ ಆಚಾರ್ಯ ಭಾವೆ ಸೆಪ್ಟಂಬರು 11 ರಂದು ತಮ್ಮ 70 ನೇ ಜನ್ಮದಿನೋತ್ಸವದಂದು ಬೀಹಾರಿಗೆ ಭೂದಾನ ಕಾರ್ಯಕ್ಕಾಗಿ ಪೋಟಾರಿನಲ್ಲಿ ಪ್ರವಾಸ ಮಾಡಬಹುದು — ಅಂದು ಬಿಹಾರು ರಾಜ್ಯದ ಸರ್ವೋದಯ ಕಾರ್ಯಕರ್ತರು ಅವರಿಗೆ ಸಾವಿರ ಗಾಯಗಳನ್ನು ದಾನ ಮಾಡಲಿರುವರು.

ಜಕ್ ಮೂಲಕ

ಬೆಂಗಳೂರು— ಸೆಕ್ರೆಟೇರಿಯಟ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಇಲಾಖಾ ಗೆಜೆಡೆಡ್ ಅಧಿಕಾರಿಗಳಿಗೆ ಸಂಬಳವನ್ನು ಪರೀಕ್ಷಾರ್ಥವಾಗಿ ಒಂದು ವರ್ಷ ಕಾಲ ಜೆಕ್ ಮೂಲಕ ಪಾವತಿ ಮಾಡಲಾಗುವುದೆಂದು ಪ್ರಕಟವಾಗಿದೆ

ರೂ 100 ಮತ್ತು 1000 ನೋಟುಗಳು ಚಲಾವಣೆ ನಿಲ್ಲುವುದಿಲ್ಲ

ನವದೆಹಲಿ— ಕಂಚಿನ ಹಣವನ್ನು ನ್ನು ಹೊರಗೆ ಬರಿಸಲು ಹೆಚ್ಚು ಮೌಲ್ಯದ 100 ಮತ್ತು 1000 ರೂಗಳ ಚಲಾವಣೆ ನಿಲ್ಲಿಸುವುದಿಲ್ಲವೆಂದೂ, ಕಾಗದದ ಉಳಿತಾಯಕ್ಕಾಗಿ ಅವುಗಳ ಅಳತೆ ಕಡಮೆ ಮಾಡಲಾಗುವುದೆಂದೂ ಪ್ರಕಟವಾಗಿದೆ

★

ಅಕ್ಕಿ ತಂಬಾಕು ವಶ

ತುಮಕೂರು— ಎಲ್ಲಾಪುರ ಗ್ರಾಮದ ಕಾವುಸಂಜೀವಯ್ಯ ಬಚ್ಚಿಟ್ಟಿದ್ದ ಸಾವಿರ ರೂಗಳ ಬೆಲೆಯ 400 ಕಿಲೋ ಅಕ್ಕಿ ತಂಬಾಕುಸ್ಸು ಎಕ್ಸೈಜಿಸವರು ವಶ ಪಡಿಸಿಕೊಂಡರು.

★

ಸೋಲು

ಲಂಡನ್— ಲಾರ್ಡ್ಸ್ ಸಭೆಯಲ್ಲಿ 24 ಓಟುಗಳಿಂದ ಲೇಬರು ಸರಕಾರ ಪರಾಜಯಗೊಂಡಿತು — ಟ್ರೇಡು ಯೂನಿಯನ್ನಿಗೆ ಸೇರಿದ ಕಾರ್ಮಿಕರಿಗೆ ಯಾವ ಬೆದರಿಕೆಯೂ ಕೂಡದೆಂಬ ತಿದ್ದುಪಡಿಗೆ ವಿರೋಧಿ ಕನ್ಸರ್ವೆಟಿವರು ಹೆಚ್ಚು ಓಟು ಬೂರೆಯಿತು.

ಪ್ರತಿಷ್ಠಟನೆ

ನವದೆಹಲಿ — ಜೂನ್ 23 ರಂದು ಭಾರತ ರಾಯಭಾರಿ ಕಚೇರಿಯ ಮೇಲೆ ಕಾರಣವಿಲ್ಲದೆ ಜಕರ್ತಾದಲ್ಲಿ ಧಾಳಿ ನಡೆದದ್ದರ ಬಗ್ಗೆ ಇಂಡೋನೇಸಿಯಾಕ್ಕೆ ಪ್ರತಿಭಟನೆ ಸಲ್ಲಿಸಲಾಗಿದೆ

ಪ್ರಧಾನಿಗಳ ಸಲಹ

ಲಂಡನ್— ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳಿಗೆ ದೀರ್ಘಾವಧಿಯ ಮತ್ತು ಕನಿಷ್ಠ ಬಡ್ಡಿಯ ಸಾಲಗಳನ್ನು ಒದಗಿಸಬೇಕೆಂದು ಭಾರತ ಪ್ರಧಾನಿಗಳು ಕಾಮನ್ವೆಲ್ತು ಸಂಮೇಳನದಲ್ಲಿ ತಿಳಿಸಿದರು

ಸಲಾ ತೀರಿಸುವುದು

ಭಾರತವು ಈ ವರ್ಷ (3 ನೇ ಯೋಜನೆಯ ಕಡೆಯ ವರ್ಷ) 97 ಕೋಟಿ ರೂಗಳ ವಿದೇಶೀ ಸಾಲವನ್ನು ಪಾವತಿಸಬೇಕಾಗಿದೆ.

ರಾಣಿಯಾವಂ ಭೋಜನಕೂಟ

ಲಂಡನ್—ಬ ಕಿಂಗ್‌ಹ್ಯಾಂ ಅರಮನೆಯಲ್ಲಿ ರಾಣಿ ಎಲಿಜಬೆತ್ತರ ಕೂಡ ಕಾಮನ್ವೆಲ್ತ್ ಪ್ರಧಾನಿಗಳು 50 ಅಡಿ ಉದ್ದದ ಸ್ವೇಸು ಮಹಾಗನಿ ಟೇಬಲಿನ ಮೇಲೆ ಭೋಜನ ಮಾಡಿದರು.

ವಿವಾಹ ಮಹೋತ್ಸವಗಳು

ಚಿ || ಬಿ ಜಿ ರಾಜಶೇಖರ್ (ದ. ಲೈಲ್ವೆ ; ಮತ್ತು ಜ್ಯೋತಿಷ್ಯರು ಶ್ರೀ ಗಂಗಾಧರ ಶಾಸ್ತ್ರಿಗಳ ಪುತ್ರ) ಮತ್ತು ಸೌ || ಸಂಪ್ರತಿ (ಕೊಳ್ಳೇಗಾಲದ ಶ್ರೀ ಜೆ. ಪಿ ಪಂಚಪಯ್ಯನವರ ಪುತ್ರಿ) ಇವರ ವಿವಾಹಮಹೋತ್ಸವವು ಗುರು ವಾರ ಕೊಳ್ಳೇಗಾಲದಲ್ಲಿ ವೈಭವವಾಗಿ ನೆರವೇರಿತು.

ಸೌ || ಪ್ರವಿಣಾ (ಮೈಸೂರು ಸರಕಾರದ ಸಹಕಾರ ಮತ್ತು ವಸತಿ ಸಚಿವರಾದ ಶ್ರೀ ಕೆ. ಪುಟ್ಟಸ್ವಾಮಿಯವರ ಪುತ್ರಿ) ಮತ್ತು ಚಿ || ಭವಾನಿ ಶಂಕರ್ ಬಿ. ಇ. (ತಿಮ್ಮಸಂದ್ರದ ಪಟೇಲ್ ಶ್ರೀ ಟಿ ಅನ್ನಾಜಿಗೌಡರ ಪುತ್ರ) ಇವರ ವಿವಾಹಮಹೋತ್ಸವವು ಬೆಂಗಳೂರಿನಲ್ಲಿ ಬುಧವಾರ ವೈಭವವಾಗಿ ನೆರವೇರಿತು.

ಸೌ || ರಾಧಾ (ಅರಕೆರೆ ಶಾಸನಭೋಗರು ಮತ್ತು ಲ್ಯಾಂಡ್‌ಲಾರ್ಡ್ ಶ್ರೀ ಎ. ಸೀತಾರಾಮಯ್ಯನವರ ಪುತ್ರಿ) ಮತ್ತು ಚಿ || ಕೆ ವಿ ನಾಗರಾಜ್ ಬಿ. ಕಾಂ (ಅಂಸೀಕರೆ ಶ್ರೀ ಕೆ ವೆಂಕಟರಾಮಯ್ಯನವರ ಪುತ್ರ) ಇವರ ವಿವಾಹ ಮಹೋತ್ಸವವು ಸೋಮವಾರ ಬೆಂಗಳೂರಿನಲ್ಲಿ ವೈಭವವಾಗಿ ನೆರವೇರಿತು.



ಚಿತ್ರ ನಂಬಿಸಿಕೊಳ್ಳಲು ಜವಳಿಗಳಿಗೆ ಕೊಡಿಯುವ ನೀರಿನ ದರಬಾರು

ವುಡ್‌ಲ್ಯಾಂಡ್ಸ್ ವೈಭವ 6 ನೇ ವಾರ

ಶ್ರೀ

ವೈಕ್ಸ್‌ನವರಿಂದ ಪ್ರಕಟಿಸಲ್ಪಡುತ್ತಾ ಯಶಸ್ವಿಯಾಗಿ ನಡೆಯುತ್ತಿದೆ

ಸುಂದರ ದೃಶ್ಯಕಾವ್ಯ, ಸಮಯೋಚಿತ ಸಂಗೀತ, ಆಕರ್ಷಣೀಯ ನೃತ್ಯಗಳು

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಚಿತ್ರ

ಜಾನ್‌ವರ್ (ಹಿಂದಿ) Janwar

ತಾರಾಗಣ— ಶಮ್ಮಿ ಕಪೂರ್, ರಾಜಶ್ರೀ, ಪೃಥ್ವಿರಾಜ್, ರಾಜೇಂದ್ರನಾಥ್

ಅಪೆರ— 25-6-65 ರಿಂದ

.... ಮಾಡ್ಡಂನ್ ಥಿಯೇಟರ್‌ನಲ್ಲಿ 100 ನೇ ಅಮೋಘ ತಮಿಳು ಚಿತ್ರ ....

ವಲ್ಲವನುಕು ವಲ್ಲವಳ್

ನಟವರ್ಗ— ಜೆಮಿನಿ ಗಣೇಶನ್, ಸಾವಿತ್ರಿ, ಅಶೋಕನ್, ತಂಗವೇಲು

ಮನೋರಮ, ಮುತ್ತುಲಕ್ಷ್ಮಿ

ಸುಧಾ

ಉತ್ತಮ ಟಾನಿಕ್

SHAKTI SUDHA

A Superb Tonin

Edited, printed and published by Dharma prachara nirata M S Krishna Rao, at the Satyavadi Press, Chamarajapuram, Mysore 4